# ಜೂನ್, 2016 - ತಾಳೆ ಬೆಳೆ ಕೃಷಿಗೆ ಸೂಕ್ತ ಸಲಹೆಗಳು

---

- ತಾಳೆ ಬೆಳೆಯನ್ನು ಕಪ್ಪು ಅಥವಾ ಗಟ್ಟಿ ಮಣ್ಣಿನಲ್ಲಿ ಬೇಸಾಯ ಮಾಡಿದರೆ ಬೇರಿನ ಬೆಳವಣಿಗೆ ಕುಂಠಿತವಾಗುತ್ತದೆ. ಸಸಿಗಳಿಗೆ ಸರಿಯಾದ ಪೋಷಕಾಂಶ ದೊರೆಯದೆ ಗರಿಗಳ ಉತ್ಪಾದನೆ ಕುಂಠಿತವಾಗುತ್ತದೆ, ಅದರಿಂದಾಗಿ ಹೆಚ್ಚಿನ ಪ್ರಮಾಣದಲ್ಲಿ ಗಂಡು ಹೂಗಳು ಬಿಡುತ್ತದೆ, ಆದುದರಿಂದ ಉತ್ತಮವಾದ ಬೇಸಾಯ ಕ್ರಮಗಳನ್ನು ಅನುಸರಿಸುವುದು ಸೂಕ್ತ.

- ಒಣಗಿದ ಮತ್ತು ರೋಗಸ್ತ ಗರಿಗಳನ್ನು ಮಾತ್ರ ತೆಗೆಯುವುದು. ಗರಿಗಳನ್ನು ಯಥೇಚ್ಚವಾಗಿ ತೆಗೆಯುವುದರಿಂದ ಗರಿ/ಮರದ ಬೆಳವಣಿಗೆ ಕುಂಠಿತವಾಗುವುದಲ್ಲದೆ ಉತ್ಪಾದನೆಯಲ್ಲಿಯೂ ಕುಸಿತವಾಗುತ್ತದೆ. ಸರಾಸರಿ ಒಂದು ಮರದಲ್ಲಿ ಸುಮಾರು 35 ಗರಿಗಳನ್ನು ಉಳಿಸಿಕೊಳ್ಳುವುದು ಸೂಕ್ತ.

- ತಾಳೆ ಬೆಳೆಯನ್ನು ನೀರಾವರಿ ಪ್ರದೇಶಗಳಲ್ಲಿ ವರ್ಷದ ಯಾವುದೇ ಋತುಮನಗಳಲ್ಲಿಯೂ ನಾಟಿ ಮಾಡಬಹುದಾಗಿದ್ದು ಜೂನ್ ನಿಂದ ಡಿಸೆಂಬರ್ ಮಾಹೆಗಳು ಉತ್ತಮ.

- ತಾಳೆ ಸಸಿಗಳನ್ನು 2 ಅಡಿ ಅಗಲ X 2 ಅಡಿ ಉದ್ದ X 2 ಅಡಿ ಆಳದ ಗುಂಡಿಗಳಲ್ಲಿ ನೆಡಬೇಕು.

- ತಾಳೆ ಸಸಿಯನ್ನು ನೆಡುವಾಗ ಪ್ರತಿ ಗುಂಡಿಗೆ 400 ಗ್ರಾಂ ಸಿಂಗಲ್ ಸೂಪರ್ ಪಾಸ್ ಫೈಟ್, 50 ಗ್ರಾಂ ಫೋರಟ್ ಮತ್ತು ಒಂದು ಬುಟ್ಟಿ ಸೀಮೆ ಗೊಬ್ಬರವನ್ನು ಚೆನ್ನಾಗಿ ಮಿಶ್ರಗೊಳಿಸಿ ಗುಂಡಿಗೆ ತುಂಬಬೇಕು.